## ಕರ್ನಾಟಕ ಮಾಹಿತಿ ಆಯೋಗದ ಮಾಹಿತಿ ಆಯುಕ್ತರ ಕೊಠಡಿಯಲ್ಲಿ ದಿನಾಂಕ 18.10.2010ರಂದು ಮಧ್ಯಾಹ್ನ 1.00 ಗಂಟೆಗೆ ನಡೆದ ನಡವಳಿ

ಹಾಜರಿದ್ದವರು:-

ಶ್ರೀ/ಶ್ರೀಮತಿ

1. ಕೆ.ಎ. ತಿಪ್ಪೇಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು
2. ಡಾ: ಹೆಚ್.ಎನ್. ಕೃಷ್ಣ, ರಾಜ್ಯ ಮಾಹಿತಿ ಆಯುಕ್ತರು,
3. ಜೆ.ಎಸ್. ವಿರೂಪಾಕ್ಷಯ್ಯ, ರಾಜ್ಯ ಮಾಹಿತಿ ಆಯುಕ್ತರು,
4. ಬಿ.ಎ. ನಾಗೇಶ್, ಕಾರ್ಯದರ್ಶಿ,
5. ಬಿ. ಶ್ರೀರಾಮ ರೆಡ್ಡಿ, ಕಾನೂನು ಅಧಿಕಾರಿ,
6. ಆರ್. ಆನಂದ, ತೀರ್ಪು ಬರಹಗಾರರು

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 52 ಆರ್‌ಟಿಐ 2009 ದಿನಾಂಕ 27/11/2009ರ ಆದೇಶದಲ್ಲಿ 4 ಲಾ ಇಂಟರ್ನ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಅನುಮತಿ ನೀಡಿದೆ.

ಆಯೋಗದಲ್ಲಿ ಪ್ರತಿದಿನ ಹೆಚ್ಚುತ್ತಿರುವ ಪ್ರಕರಣಗಳ ಸಂಖ್ಯೆಯ ಹಿನ್ನೆಲೆಯಲ್ಲಿ, ಕಾನೂನು ಪದವೀಧರರ ನೇಮಕಾತಿಯನ್ನು ಆಯೋಗದಲ್ಲಿ ಪ್ರಕರಣಗಳ ಬಗ್ಗೆ ಸಮಾವೇಶ, ಕೇಸ್ ವಿವರಗಳನ್ನು ತಯಾರಿಸಲು, ಪ್ರತಿ ಹಂತದಲ್ಲಿ ಕೇಸ್ ಡೈರಿ ತಯಾರಿಸುವುದು ಮತ್ತು ಉಚ್ಚ ನ್ಯಾಯಲಯದಿಂದ ಹಸ್ತಾಂತರಿಸಿರುವ ತಡೆಯಾಜ್ಞೆ ಮತ್ತು ತೀರ್ಪಿನ ಮುಂತಾದ ವಿಷಯಗಳನ್ನು ನಡೆಸುವ ಬಗ್ಗೆ ಚರ್ಚಿಸಲಾಯಿತು.

ಆಯೋಗದ ಪ್ರಕಟಣೆಗೆ ಉತ್ತರವಾಗಿ 60 ಅರ್ಜಿಗಳು ಬಂದಿದ್ದು, ಮಂಜೂರಾಗಿರುವ ನಾಲ್ಕು ಇಂಟರ್ನ್‌ಗಳ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

ಅಲ್ಲದೆ, ಆಯೋಗದ ಕಾರ್ಯದರ್ಶಿಗಳು ಹಾಗೂ ಕಾನೂನು ಅಧಿಕಾರಿಗಳು ಈ ಆಯ್ಕೆ ಕರ್ತವ್ಯವನ್ನು ನಿರ್ವಹಿಸಬೇಕೆಂದು ಹಾಗೂ ದಿನಾಂಕ 18-11-2010ರಲ್ಲಿ ಎಲ್ಲಾ ಇಂಟರ್ನ್‌ಗಳ ಆಯ್ಕೆಗಾಗಿ ಸಂದರ್ಶನ ಕೈಗೊಳ್ಳಲು ಸೂಚಿಸಲಾಯಿತು.

ಆಯೋಗದ ಕಾರ್ಯದರ್ಶಿಗಳು ಹಾಗೂ ಕಾನೂನು ಅಧಿಕಾರಿಗಳು ಇಂಟರ್ನ್‌ಗಳ ಆಯ್ಕೆಗಾಗಿ ಮಾನದಂಡದ ಬಗ್ಗೆ ಒಂದು ಕರಡು ತಯಾರಿಸಿ ಅನುಮತಿ ಪಡೆಯಬೇಕೆಂದು ಹಾಗೂ ಆಯ್ಕೆಯ ನಂತರ ಆಯ್ಕೆದಾರರು ನಿರ್ವಹಿಸಬೇಕಾದ ಕರ್ತವ್ಯ/ಜವಾಬ್ದಾರಿಗಳ ಬಗ್ಗೆ ಒಂದು ಚಾರ್ಟ್ ತಯಾರಿಸುವಂತೆ ತೀರ್ಮಾನಿಸಲಾಯಿತು.

(ಕೆ.ಎ. ತಿಪ್ಪೇಸ್ವಾಮಿ)
ರಾಜ್ಯ ಮಾಹಿತಿ ಆಯುಕ್ತರು

(ಡಾ: ಹೆಚ್.ಎನ್. ಕೃಷ್ಣ)
ರಾಜ್ಯ ಮಾಹಿತಿ ಆಯುಕ್ತರು

18/x/2010
(ಜೆ.ಎಸ್. ವಿರೂಪಾಕ್ಷಯ್ಯ)
ರಾಜ್ಯ ಮಾಹಿತಿ ಆಯುಕ್ತರು

ಎಲ್ಲಾ ಸಂಬಂಧಪಟ್ಟವರಿಗೆ